<u>ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ</u>

ಸಿ.ಸಿ. ನಂಬ್ರ: **228 /2024**
ಸಿ.ಡಬ್ಲ್ಯೂ- **12**
ಪಿ.ಡಬ್ಲ್ಯೂ- **11**

| | | |
|---|---|---|
| ಸಾಕ್ಷಿದಾರರ ಹೆಸರು | : | ರತ್ನಾಕರ ಶೆಟ್ಟಿ |
| ತಂದೆಯ ಹೆಸರು | : | ಬಿ ಸೂರಪ್ಪ ಶೆಟ್ಟಿ |
| ಪ್ರಾಯ | : | 52 ವರ್ಷ |
| ಉದ್ಯೋಗ | : | ಕರಾವಳಿ ಪೊಲೀಸ್ ಠಾಣೆ, ಮಲ್ಪೆ |
| ವಾಸ | : | ಬ್ರಹ್ಮಾವರ |

ದಿನಾಂಕ: 30 - 06-2025 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನಾನು ದಿನಾಂಕ 08-05-2016 ರಿಂದ ದಿನಾಂಕ 08-07-2019 ರವರೆಗೆ ಮುಖ್ಯ ಪೇದೆಯಾಗಿ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ದಿನಾಂಕ: 01-06-2016 ರಂದು ಚಾಸಾ 11 ರವರು ಉಡುಪಿ ಆದರ್ಶ ಆಸ್ಪತ್ರೆಯಿಂದ ಸೂಚನಾ ಪತ್ರದಂತೆ ಗಾಯಾಳುವಿನ ಹೇಳಿಕೆ ಪಡೆದುಕೊಂಡು ಠಾಣೆಗೆ ಬಂದಿದ್ದು, ಹೇಳಿಕೆ ಸ್ವೀಕರಿಸಿ ಅಪರಾಧ ಸಂಖ್ಯೆ 144/16 ರಂತೆ ಪ್ರಕರಣ ದಾಖಲಿಸಿಕೊಂಡು ಮೇಲಾಧಿಕಾರಿಯವರಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಸಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 11(ಎ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿತರ ಪರ   ಎಮ್ ಡಿ ಎಸ್. ವಕೀಲರಿಂದ</u>

1. ಚಾಸಾ 1 ರವರು ಚಾಸಾ 11 ರವರ ಮುಂದೆ ಯಾವುದೇ ಹೇಳಿಕೆ ಸ್ವೀಕರಿಸಿದ್ದು ಇಲ್ಲ ಹಾಗೂ ನಾನು ಯಾವುದೇ ಪ್ರಥಮ ವರ್ತಮಾನ ವರದಿಯನ್ನು  ಸ್ವೀಕರಿಸಿ ಪ್ರಕರಣ ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ  ಇಲ್ಲ</u>

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ